**ಓ.ಎಸ್. ನಂಃ 360/2025**

**ಪಿ.ಡಬ್ಲ್ಯೂಃ 1**

**ದಿನಾಂಕ 02.04.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಡಿ.ಎಂ.ಟಿ. ವಕೀಲರಿಂದಃ**

10. ಪ್ರತಿವಾದಿಯು ಗೃಹಿಣಿ ಆಗಿದ್ದು, ಅವರಿಗೆ ಯಾವುದೇ ಉದ್ಯೋಗ ಇಲ್ಲ ಎಂದರೆ ಸರಿ. ಮನೆ ಕಟ್ಟುವ ಉದ್ದೇಶಕ್ಕಾಗಿ ತಮಗೆ ಸಾಲ ಬೇಕು ಎಂದು ಪ್ರತಿವಾದಿಯು ಹೇಳಿದ್ದರು. ಪ್ರತಿವಾದಿಯು 2022-23 ರಲ್ಲಿ ತಮ್ಮ ಮನೆಯನ್ನು ಕಟ್ಟಿರುತ್ತಾರೆ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯು 2022-23 ರ ಪೂರ್ವದಲ್ಲಿಯೇ ತಮ್ಮ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ 2,50,000/- ಸಾಲವನ್ನು ಪಡೆಯುವಷ್ಟು ಅವರಿಗೆ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

11. ನಿಪಿ.1 ರ ದಾಖಲೆಗೆ ಪ್ರತಿವಾದಿಯು ಆಂಗ್ಲ ಭಾಷೆಯಲ್ಲಿ ತಮ್ಮ ಸಹಿಯನ್ನು ಮಾಡಿರುತ್ತಾರೆ. ನಿಪಿ.1 ರ ದಾಖಲೆಗೆ ಪ್ರತಿವಾದಿಯು ಎರಡು ಕಡೆಯಲ್ಲಿ ತಮ್ಮ ಸಹಿಯನ್ನು ಮಾಡಿರುತ್ತಾರೆ. ನಿಪಿ.1(ಎ) ಮತ್ತು ನಿಪಿ.1(ಬಿ) ಎಂದು ನಿಶಾನೆಪಡಿಸಲಾದ ಪ್ರತಿವಾದಿಯ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಿಪಿ.1 ರ ದಾಖಲೆಗೆ ಪ್ರತಿವಾದಿಯು ಎರಡು ಕಡೆಯಲ್ಲಿ ಸಹಿಯನ್ನು ಮಾಡಿರುವುದಿಲ್ಲ ಬದಲಾಗಿ ನಾನು ಖಾಲಿ ಛಾಪಾ ಕಾಗದಕ್ಕೆ ಪ್ರತಿವಾದಿಯ ಸಹಿ ಪಡೆದಿದ್ದ ಕಾರಣ ನಾನು ನಿಪಿ.1 ರಲ್ಲಿ ಮೂರು ಕಡೆ ಪ್ರತಿವಾದಿಯ ಸಹಿಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರ ಮೊದಲನೇ ಪುಟದಲ್ಲಿರುವ ಸಹಿ ಪ್ರತಿವಾದಿಯ ಸಹಿ ಅಲ್ಲ.

12. ನಾನು ಪ್ರತಿವಾದಿಗೆ 2,50,000/- ಸಾಲವನ್ನು ನಗದಿನ ರೂಪಾದಲ್ಲಿ ಕೊಟ್ಟಿರುತ್ತೇನೆ. ಜಮೀನನ್ನು ಖರೀದಿಸುವ ಉದ್ದೇಶಕ್ಕಾಗಿ ಸದರಿ 2,50,000/- ರೂಪಾಯಿ ಹಣವನ್ನು ನಾನು ಮನೆಯಲ್ಲಿಯೇ ಕೂಡಿ ಇಟ್ಟಿದ್ದು, ಪ್ರತಿವಾದಿಯು ನನ್ನ ಬಳಿ ಸಾಲ ಕೇಳಿದ ಕಾರಣ ನಾನು ಸದರಿ 2,50,000/- ರೂಪಾಯಿ ಹಣವನ್ನು ಪ್ರತಿವಾದಿಗೆ ಸಾಲವಾಗಿ ಕೊಟ್ಟಿರುತ್ತೇನೆ. ನನ್ನ ಪಕ್ಕದ ಜಮೀನಿನವರಾದ ಕೃಷ್ಣಪ್ಪರವರಿಂದ ಜಮೀನನ್ನು ಖರೀದಿಸುವ ಮಾತುಕತೆ ನಡೆಸಿದ್ದೆ. ಜಮೀನನ್ನು ಖರೀದಿಸಲು ನಾನು ಸದರಿ ಕೃಷ್ಣಪ್ಪರವರೊಂದಿಗೆ ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಂಡಿರುವುದಿಲ್ಲ. ನಾನು ಹೇಳಿದ ಹಾಗೆ ಸದರಿ ಕೃಷ್ಣಪ್ಪರವರಿಂದ ಜಮೀನನ್ನು ಖರೀದಿಸುವ ಮಾತುಕತೆ

ನಡೆಸಿರುವುದಿಲ್ಲ ಹಾಗೂ ನನ್ನ ಬಳಿ 2,50,000/- ರೂಪಾಯಿ ಹಣ ಇರಲಿಲ್ಲ ಎಂದರೆ ಸರಿಯಲ್ಲ.

13. ಪ್ರತಿವಾದಿಗೆ ನಾನು ಕೆ ಆರ್ ನಗರದಲ್ಲಿ ಸಾಲವನ್ನು ನೀಡಿರುತ್ತೇನೆ. ನಾನು ಪ್ರತಿವಾದಿಗೆ ಸಾಲವನ್ನು ಕೊಡುವಾಗ ನಾನು, ಪ್ರತಿವಾದಿ, ಪ್ರತಿವಾದಿಯ ಗಂಡ, ಗಿರೀಶ್, ಹೇಮರಾಜು ರವರು ಹಾಜರಿದ್ದೇವು. ಸದರಿ ಗಿರೀಶ್, ಹೇಮರಾಜು ರವರು ನನ್ನ ಪರಿಚಯಸ್ಥರು ಎಂದರೆ ಸರಿ. ಖಾಲಿ ಛಾಪಾ ಕಾಗದದಲ್ಲಿ ಪ್ರತಿವಾದಿಯಿಂದ ಪಡೆದಿದ್ದ ಸಹಿಯನ್ನು ದುರುಪಯೋಗಪಡಿಸಿಕೊಂಡು ನಾನು ನಿಪಿ.1 ರ ಸುಳ್ಳು ದಾಖಲೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಎಂದಿಗೂ ಸಹ ನನ್ನೊಂದಿಗೆ ಸಾಲವನ್ನು ಪಡೆಯದಿದ್ದರು ಸಹ ಪ್ರತಿವಾದಿಯ ಗೆಳತಿಯಾದ ದರ್ಶಿನಿರವರಿಗೆ ನೀಡಿದ ಸಾಲದ ಭದ್ರತೆಗಾಗಿ ಪ್ರತಿವಾದಿಯಿಂದ ಪಡೆದಿದ್ದ ಖಾಲಿ ಛಾಪಾ ಕಾಗದದ ಮೇಲಿನ ಸಹಿಯನ್ನು ದುರುಪಯೋಗಪಡಿಸಿಕೊಂಡು ನಾನು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ದರ್ಶಿನಿ ಎನ್ನುವವರ ಪರಿಚಯವೇ ಇಲ್ಲ ಎಂದು ಸ್ವತಃ ನುಡಿದಿರುತ್ತಾರೆ. ನಿಪಿ.1 ರ ಸಾಕ್ಷಿದಾರರನ್ನು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

14. ನನಗೆ ಬಿ.ಪಿ.ಎಲ್ ಪಡಿತರ ಚೀಟಿ ಇದೆ ಎಂದರೆ ಸರಿ. ಬಡತನ ರೇಖೆಗಿಂತ ಕೆಳಗೆ ಇರುವ ವ್ಯಕ್ತಿಗಳಿಗೆ ಮಾತ್ರ ಸರಕಾರದವರು ಬಿ.ಪಿ.ಎಲ್ ಪಡಿತರ ಚೀಟಿಯನ್ನು ಕೊಡುತ್ತಾರೆ ಎಂದರೆ ಸರಿ. 2,50,000/- ರೂಪಾಯಿ ಸಾಲವನ್ನು ಕೊಡುವಷ್ಟು ನನಗೆ ಆರ್ಥಿಕ ಸಾಮರ್ಥ್ಯ ಇಲ್ಲದಿದ್ದರು ಸಹ ನಾನು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**